ಸೂರ್ಯೋದಯಕ್ಕೆ ಮೊದಲು ಮತ್ತು ಸೂರ್ಯಾಸ್ತಕ್ಕೆ ಮೊದಲು ನಮಾಝ್ ಮಾಡಿದವರು ಎಂದಿಗೂ ನರಕವನ್ನು ಪ್ರವೇಶಿಸುವುದಿಲ್ಲ

ಅಬೂ ಝುಹೈರ್ ಉಮಾರ ಬಿನ್ ರುಐಬ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ)
ಹೇಳಿದರು: "ಸೂರ್ಯೋದಯಕ್ಕೆ ಮೊದಲು ಮತ್ತು ಸೂರ್ಯಾಸ್ತಕ್ಕೆ ಮೊದಲು ನಮಾಝ್ ಮಾಡಿದವರು
ಎಂದಿಗೂ ನರಕವನ್ನು ಪ್ರವೇಶಿಸುವುದಿಲ್ಲ." [صحيح] [رواه مسلم]

ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸುವುದೇನೆಂದರೆ, ಫಜ್ರ್ ನಮಾಝ್ ಮತ್ತು ಅಸರ್ ನಮಾಝನ್ನು ತಪ್ಪದೆ ನಿರ್ವಹಿಸುವವರು ನರಕವನ್ನು ಪ್ರವೇಶಿಸುವುದಿಲ್ಲ. ಇಲ್ಲಿ ಈ ಎರಡು ನಮಾಝ್ಗಳನ್ನು ವಿಶೇಷವಾಗಿ ಉಲ್ಲೇಖಿಸಿದ್ದೇಕೆಂದರೆ, ಇವೆರಡು ಅತ್ಯಂತ ಭಾರವಾದ ನಮಾಝ್ಗಳಾಗಿವೆ. ಬೆಳಗ್ಗಿನ ಸಮಯವು ಸವಿ ನಿದ್ರೆಯ ಸಮಯವಾಗಿದೆ ಮತ್ತು ಅಸರ್ನ ಸಮಯವು ದೈನಂದಿನ ಕೆಲಸ-ಕಾರ್ಯಗಳ ಹಾಗೂ ವ್ಯಾಪಾರದ ಸಮಯವಾಗಿದೆ.ಅತ್ಯಂತ ಕಷ್ಟದಿಂದ ನಿರ್ವಹಿಸಲಾಗುವ ಈ ಎರಡು ನಮಾಝ್ಗಳಿಗೆ ಕಾಳಜಿ ನೀಡುವವರು ಉಳಿದ ನಮಾಝ್ಗಳಿಗೂ ಕಾಳಜಿ ನೀಡುತ್ತಾರೆ.

http://www.sunnah.global/hadeeth/kn/show/6215